# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : **713**
ಸದಸ್ಯರ ಹೆಸರು : ಶ್ರೀ ಡಾ:ಧನಂಜಯ ಸರ್ಜಿ (ಪದವೀಧರರ ಕ್ಷೇತ್ರ)
ಉತ್ತರಿಸುವ ದಿನಾಂಕ : **12/03/2025**
ಉತ್ತರಿಸುವ ಸಚಿವರು : ಕಂದಾಯ ಸಚಿವರು

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಶಿವಮೊಗ್ಗ, ಉಡುಪಿ, ದಕ್ಷಿಣ ಕನ್ನಡ, ಚಿಕ್ಕಮಗಳೂರು ಮತ್ತು ಕೊಡಗು ಜಿಲ್ಲೆಗಳಲ್ಲಿ ಬಗರ್‌ಹುಕುಂ, ಅಕ್ರಮ-ಸಕ್ರಮ, ಕುಮ್ಕಿ ಜಮೀನು ನಮೂನೆ 53, 57, ಬಾಣೆ, ಜುಮ್ಮಾ ಜುಮ್ಮಾ ಸೇರಿದಂತೆ ವಿವಿಧ ಕೃಷಿ ಪೂರಕ ಜಮೀನು ಮಂಜೂರಾತಿಗೆ ಸೇರಿದಂತೆ ಸ್ವೀಕೃತವಾಗಿರುವ ಅರ್ಜಿಗಳ ಸಂಖ್ಯೆ ಎಷ್ಟು: | ನಮೂನೆ 53, 57 ರಡಿ ಸ್ವೀಕೃತವಾದ ಅರ್ಜಿಗಳ ವಿವರ ಈ ಕೆಳಕಂಡಂತಿರುತ್ತದೆ. (ಕೆಳಗಿನ ಕೋಷ್ಟಕಗಳು ನೋಡಿ) |
| ಆ) | ಮಂಜೂರಾದ, ತಿರಸ್ಕೃತವಾದ ವಿಲೇವಾರಿಗೆ ಬಾಕಿ ಇರುವ ಅರ್ಜಿಗಳ ಸಂಖ್ಯೆಗಳೆಷ್ಟು: | |

| ಜಿಲ್ಲೆಯ ಹೆಸರು | ನಮೂನೆ | ಸ್ವೀಕೃತವಾದ ಅರ್ಜಿಗಳು | ಮಂಜೂರಾದ ಅರ್ಜಿಗಳು | ತಿರಸ್ಕೃತ ಅರ್ಜಿಗಳು | ಬಾಕಿ ಇರುವ ಅರ್ಜಿಗಳು |
|---|---|---|---|---|---|
| ಶಿವಮೊಗ್ಗ | 53 | 146601 | 18805 | 127498 | 298 |
| ಉಡುಪಿ | | 58382 | 13284 | 31910 | 13188 |
| ದಕ್ಷಿಣ ಕನ್ನಡ | | 111420 | 32336 | 75530 | 3554 |
| ಚಿಕ್ಕಮಗಳೂರು | | 77178 | 14853 | 53317 | 9008 |
| ಕೊಡಗು | | 14321 | 3434 | 8854 | 2051 |

| ಜಿಲ್ಲೆಯ ಹೆಸರು | ನಮೂನೆ | ಸ್ವೀಕೃತವಾದ ಅರ್ಜಿಗಳು | ಮಂಜೂರಾದ ಅರ್ಜಿಗಳು | ತಿರಸ್ಕೃತ ಅರ್ಜಿಗಳು | ಬಾಕಿ ಇರುವ ಅರ್ಜಿಗಳು |
|---|---|---|---|---|---|
| ಶಿವಮೊಗ್ಗ | 57 | 118004 | 80 | 43392 | 74532 |
| ಉಡುಪಿ | | 62276 | 23 | 10403 | 51850 |
| ದಕ್ಷಿಣ ಕನ್ನಡ | | 124405 | 4863 | 13590 | 105952 |
| ಚಿಕ್ಕಮಗಳೂರು | | 114266 | 197 | 30188 | 83881 |
| ಕೊಡಗು | | 22252 | 672 | 4644 | 16936 |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಇ) | ಮಂಜೂರಾದ ಪ್ರಕರಣಗಳಲ್ಲಿ ಆರ್.ಟಿ.ಸಿ ಮತ್ತು ಹಕ್ಕುಪತ್ರ ನೀಡಲು ಬಾಕಿ ಇರುವ ಪ್ರಕರಣಗಳೆಷ್ಟು: ಅರ್ಜಿಗಳು ತಿರಸ್ಕೃತಗೊಳ್ಳಲು ಪ್ರಮುಖ ಕಾರಣಗಳೇನು: | ಶಿವಮೊಗ್ಗ, ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಮಂಜೂರಾದ ಪ್ರಕರಣಗಳಲ್ಲಿ ಆರ್.ಟಿ.ಸಿ ಮತ್ತು ಹಕ್ಕುಪತ್ರ ನೀಡಲು ಬಾಕಿ ಪ್ರಕರಣಗಳು ಇರುವುದಿಲ್ಲ.<br><br>ಚಿಕ್ಕಮಗಳೂರು ಜಿಲ್ಲೆಗೆ ಸಂಬಂಧಿಸಿದಂತೆ ನಮೂನೆ 53, ಮತ್ತು 57 ರಡಿ ಒಟ್ಟು 15050 ಮಂಜೂರಾದ ಪ್ರಕರಣಗಳಿದ್ದು, 688 ಹಕ್ಕುಪತ್ರ ನೀಡಲು ಮತ್ತು 596ರ ಪ್ರಕರಣಗಳಲ್ಲಿ ಆರ್‌ಟಿಸಿ ನೀಡಲು ಬಾಕಿ ಇರುತ್ತವೆ. |

| | | |
|---|---|---|
| | | ಕೊಡಗು ಜಿಲ್ಲೆಯಲ್ಲಿ 525 ಹಕ್ಕುಪತ್ರ ಮತ್ತು ಆರ್‌ಟಿಸಿ ನೀಡುವ ಪ್ರಕರಣಗಳು ಬಾಕಿ ಇರುತ್ತವೆ.<br><br>ಕರ್ನಾಟಕ ಭೂ ಕಂದಾಯ ಕಾಯ್ದೆ, 1964ರ ಕಲಂ 94 ಬಿ ಮತ್ತು 94 ಎ-4 ರಡಿ ಅನಧಿಕೃತ ಸಾಗುವಳಿಯ ಸಕ್ರಮೀಕರಣ ಕೋರಿ ಅರ್ಜಿ ಸಲ್ಲಿಸುವ ಸಾಗುವಳಿದಾರನು ಕರ್ನಾಟಕ ಭೂ ಕಂದಾಯ ನಿಯಮಗಳು 1966ರ ನಿಯಮ 108 ಎಫ್ ರಲ್ಲಿ ನಿಗದಿಪಡಿಸಿದ ಅರ್ಹತೆಗಳನ್ನು ಹೊಂದಿರತಕ್ಕದ್ದು.<br><br>ಈಗಾಗಲೇ ನಮೂನೆ 50,53 ರಲ್ಲಿ ಅರ್ಜಿ ಸಲ್ಲಿಸಿದ್ದಲ್ಲಿ ಪುನಃ ನಮೂನೆ 57 ರಡಿ ಅರ್ಜಿ ಸಲ್ಲಿಸಲು ಅವಕಾಶವಿರುವುದಿಲ್ಲ.<br><br>ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಅವಧಿ ಮೀರಿ ಸಲ್ಲಿಸಿದ ಅರ್ಜಿಗಳನ್ನು ಪರಿಗಣಿಸಲು ಅವಕಾಶವಿರುವುದಿಲ್ಲ.<br><br>ಅರಣ್ಯ ಜಮೀನು, ಕುಮ್ಕಿ, ಕಾನಾ ಬಾಣೆ ಜಮೀನು, ಪೊರಂಬೋಕು ಜಮೀನು, ಕೆರೆ ಕಟ್ಟೆ ಇತ್ಯಾದಿ ಜಲಮೂಲಗಳು, 18 ವರ್ಷ ಆಗದವರು ಸಲ್ಲಿಸಿದ ಅರ್ಜಿಗಳು, ಪುರಸಭೆ/ನಗರಸಭೆ/ನಗರ ಪಂಚಾಯತ್/ ಪಟ್ಟಣ ಪಂಚಾಯತ್/ಮಹಾನಗರ ವ್ಯಾಪ್ತಿಯಲ್ಲಿ ಹಾಗೂ ಅದರ ಪರಿಮಿತಿಯಲ್ಲಿ ಬರುವ ಜಮೀನುಗಳನ್ನು ಅಕ್ರಮಸಕ್ರಮ ದಡಿ ಮಂಜೂರು ಮಾಡಲು ಅವಕಾಶವಿರುವುದಿಲ್ಲ |
| ಈ) | ಬಾಕಿ ಇರುವ ಅರ್ಜಿಗಳನ್ನು ವಿಲೇವಾರಿ ಮಾಡಿ, ಅರ್ಹರಿಗೆ ಭೂ ಮಂಜೂರಾತಿ ನೀಡಲು ವಿಳಂಬವಾಗುತ್ತಿರುವುದು ಮತ್ತು ಮಂಜೂರಾದ ಪ್ರಕರಣಗಳಲ್ಲಿ ಆರ್.ಟಿ.ಸಿ. ಪಹಣಿ ಪತ್ರ ಮತ್ತು ಸಾಗುವಳಿ ಚೀಟಿ ನೀಡುವಲ್ಲಿ ವಿಳಂವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: ಈ ಕುರಿತು ಸರ್ಕಾರ ಯಾವ ಕ್ರಮಕೈಗೊಳ್ಳುವುದು? | ಕರ್ನಾಟಕ ಭೂ ಕಂದಾಯ ಅಧಿನಿಯಮ 1964ರ ಕಲಂ 94-ಎ, 94-ಬಿ, 94-ಎ(4)ರಡಿ ಕಲ್ಪಿಸಿರುವ ಅವಕಾಶದಂತೆ ನಮೂನೆ-50, 53 ಮತ್ತು 57ರಡಿ ಸ್ವೀಕೃತವಾಗಿರುವ ಅರ್ಜಿಗಳನ್ನು ಶೀಘ್ರವಾಗಿ ಇತ್ಯರ್ಥಪಡಿಸುವ ಕುರಿತು ಸರ್ಕಾರದ ಸುತ್ತೋಲೆ ಸಂಖ್ಯೆ ಕಂಇ 45 ಎಲ್.ಜಿ.ಪಿ 2023 ದಿನಾಂಕ:01/12/2023 ರಲ್ಲಿ ಮಾರ್ಗಸೂಚಿಗಳನ್ನು ಹೊರಡಿಸಲಾಗಿರುತ್ತದೆ. |

ಸಂಖ್ಯೆ: ಆರ್‌ಡಿ 38 ಎಲ್‌ಜಿಕ್ಯೂ 2025

(ಕೃಷ್ಣ ಬೈರೇಗೌಡ)
ಕಂದಾಯ ಸಚಿವರು